# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ

ಮಾನಸಗಂಗೋತ್ರಿ, ಮೈಸೂರು – 570 006

ದೂರವಾಣಿ :0821–2419318/386/429 e-mail : dswuommgm@gmail.com


ಸಂಖ್ಯೆ:ವಿಕ್ಷೇಪಾ.9/ 630 /2017–18 ದಿನಾಂಕ: 07/07/2018

**ಸುತ್ತೋಲೆ**

ವಿಷಯ: 2018–19ನೇ ಶೈಕ್ಷಣಿಕ ಸಾಲಿನ ಸ್ನಾತಕಪೂರ್ವ ವಿದ್ಯಾರ್ಥಿನಿಲಯಗಳ ಪ್ರವೇಶಾತಿಯನ್ನು ಕುರಿತು.

ಉಲ್ಲೇಖ: 1) ಈ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ವಿಕ್ಷೇಪಾ.9/461(b)/2017–18 ದಿ. 08/06/2018

2) ಈ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ವಿಕ್ಷೇಪಾ.9/488(A)/2017–18 ದಿ. 13/06/2018

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಉಲ್ಲೇಖಿತ ಸುತ್ತೋಲೆಗಳನ್ವಯ, 2017–18ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಸ್ನಾತಕಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ವಾಸ್ತವ್ಯ ಪಡೆದಿದ್ದ ವಿದ್ಯಾರ್ಥಿಗಳಿಗೆ, ಅದೇ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿಯನ್ನು ಪಡೆಯಲು ಅರ್ಜಿಗಳನ್ನು ದಿ. 18–06–2018 ರಿಂದ 23–06–2018ರವರೆಗೆ ವಿತರಿಸಿ, ಭರ್ತಿ ಮಾಡಿದ ಅರ್ಜಿಗಳನ್ನು ದಿ. 25–06–2018ರೊಳಗೆ ಸ್ವೀಕರಿಸಿ, ದಿ. 29–06–2018 ರಂದು ಹಾಗೂ 30–06–2018 ರಂದು ಪ್ರವೇಶಾತಿಯನ್ನು ನೀಡಲಾಗಿದೆ.

2018–19ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಸ್ನಾತಕಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಹೊಸದಾಗಿ ಪ್ರವೇಶಾತಿ ಬಯಸಿದ ವಿದ್ಯಾರ್ಥಿಗಳಿಗೆ ದಿ. 18–06–2018 ರಿಂದ 23–06–2018ರ ವರೆಗೆ ಅರ್ಜಿಗಳನ್ನು ವಿತರಿಸಿ, ಭರ್ತಿ ಮಾಡಿದ ಅರ್ಜಿಗಳನ್ನು ದಿ. 25–06–2018ರೊಳಗೆ ಸ್ವೀಕರಿಸಿ, ದಿ. 02–07–2018 ರಿಂದ 07–07–2018ರವರೆಗೆ ಪ್ರವೇಶಾತಿಯನ್ನು ನೀಡಲಾಗಿದೆ.

**ಕಾರಣಾಂತರಗಳಿಂದ ಈ ಅವಧಿಯಲ್ಲಿ ಅರ್ಜಿಯನ್ನು ಪಡೆಯದ ಅಥವಾ ಪ್ರವೇಶಾತಿಗೆ ಹಾಜರಾಗದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ, ಪ್ರವೇಶಾತಿ ದಿನಾಂಕವನ್ನು 10–07–2018ರವರೆಗೆ ವಿಸ್ತರಿಸಲಾಗಿದೆ.**

07/07/18

ನಿರ್ದೇಶಕ
DIRECTOR OF STUDENT WELFARE
UNIVERSITY OF MYSORE, MYSURU

ಗೆ,

1. ಶಿಕ್ಷಕ ಸಲಹೆಗಾರರು, ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕಪೂರ್ವ ವಿದ್ಯಾರ್ಥಿನಿಲಯಗಳು, ಮೈಸೂರು, ಚಾಮರಾಜನಗರ(**ಈ ಸುತ್ತೋಲೆಯ ನಕಲು ಪ್ರತಿಯನ್ನು ನಿಲಯದ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು**).
2. ಪ್ರಾಂಶುಪಾಲರು, ಮಹಾರಾಜ/ಯುವರಾಜ/ಲಲಿತ ಕಲೆಗಳ ಕಾಲೇಜು, ಮೈಸೂರು(**ಈ ಸುತ್ತೋಲೆಯ ನಕಲು ಪ್ರತಿಯನ್ನು ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು**).
3. ಕಚೇರಿ ಪ್ರತಿ/ರಕ್ಷಾ ಕಡತಕ್ಕೆ